ಎಲ್.ಎ.ಸಿ.ನಂ. 1604/2021
ಪಿ.ಡಬ್ಲ್ಯೂ: 01

**<u>ಸಾಕ್ಷಿಯನ್ನು ಇಂದು ದಿ.20.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**
**<u>ಪಾಟೀ ಸವಾಲುಃ ಎದುರುದಾರರ ಪರವಾಗಿಃ</u>**

1) ನನ್ನ ಜಮೀನು ಸರ್ವೆ ನಂ.162/1, 162/2 ಸಮೋ 162 ಇದ್ದು, ಅದು ಒಟ್ಟು 05 ಎಕರೆ 37 ಗುಂಟೆ ಜಮೀನು ಇದ್ದು, ಅದರಲ್ಲಿ 31 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ. ಸದರಿ ಜಮೀನು ಒಟ್ಟು 8 ಜನರ ಮಾಲೀಕತ್ವದಲ್ಲಿ ಇರುತ್ತದೆ ಎನುವುದು ನಿಜ. ನಿ.ಪಿ.1 ರಂತೆ ರೆಫರೆನ್ಸ ಅರ್ಜಿಯನ್ನು ನಾನೊಬ್ಬನೇ ಸಲ್ಲಿಸಿರುತ್ತೇನೆ ಎನ್ನುವುದು ನಿಜ. ಇನ್ನೂ 7 ಜನರ ಮಾಲೀಕತ್ವದ ಕುರಿತು ನಿ.ಪಿ.1 ರಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎನ್ನುವುದು ನಿಜ. 1ನೇ ಎದುರುದಾರರು ಒಟ್ಟು 8 ಜನರ ಹೆಸರಿನಲ್ಲಿ ಐತೀರ್ಪು ಘೋಷಿಸಿದ್ದು ಆ ಪ್ರಕಾರ ನೊಟೀಸನ್ನು ಸಹ 8 ಜನರಿಗೆ ನೀಡಿರುತ್ತಾರೆ ಎನ್ನುವುದು ನಿಜ. 8 ಜನರಿಗೂ ಸಮಾನ ಹಕ್ಕು ಇರುತ್ತದೆ ಎನ್ನುವುದು ನಿಜ. ಸದರಿ 7 ಜನರು ನನಗೆ ಅಧಿಕಾರ ಪತ್ರ ನೀಡಿದ್ದರ ಕುರಿತು ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎನ್ನುವುದು ನಿಜ. ಇನ್ನುಳಿದ 7 ಜನರು 1 ನೇ ಎದುರುದಾರರು ಘೋಷಿಸಿದಂತಹ ಐತೀರ್ಪನ್ನು ಒಪ್ಪಿಕೊಂಡಿದ್ದರಿಂದ ಯಾವುದೇ ರೆಫರೆನ್ಸ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ ನಂ.4 ರಲ್ಲಿ ನಾನೊಬ್ಬನೇ ಮಾಲೀಕನಿರುತ್ತೇನೆ ಎಂದು ನಮೂದಿಸಲಾಗಿದೆ ಎನ್ನುವುದಜ ನಿಜ.

2) **ನಾವು ಈ ಪ್ರಕರಣವಲ್ಲದೇ ಬೇರೆ ಯಾವುದೇ ನ್ಯಾಯಾಲಯದಲ್ಲಿ ನನ್ನ ಸ್ವಾಧೀನಗೊಂಡ ಜಮೀನಿಗೆ ಸಂಬಂದಿಸಿದಂತೆ ಹೆಚ್ಚುವರಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ.**

3) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಮತ್ತು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ನೋಟಿಸ ಜಾರಿ ಮಾಡಿದ ನಂತರ ಅಧಿಕಾರಿಗಳು ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ **ರೂಡಗಿ** ಗ್ರಾಮಕ್ಕೆ ನಿಗದಿಮಾಡಿದ ಬೆಲೆಯನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4) ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಅರ್ಜಿಯನ್ನು ನಾನು ಸರಿಯಾದ ಸಮಯದಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5) ನಮ್ಮ ಜಮೀನು ಸಂಪೂರ್ಣ ಒಣಬೇಸಾಯದ ಜಮೀನುಗಳು ಎಂದರೆ ಸರಿ.

6) ಮುದ್ದೇಬಿಹಾಳದಿಂದ ರೂಡಗಿ ಗ್ರಾಮಕ್ಕೆ ಹೋಗಬೇಕಾದರೆ ಬಿದರಕುಂದಿ, ಬಸರಕೋಡ, ನಂತರ ರೂಡಗಿ ಗ್ರಾಮ ಇರುತ್ತದೆ ಎನ್ನುವುದು ನಿಜ. ರೂಡಗಿ ಗ್ರಾಮದ ಅಕ್ಕಪಕ್ಕದಲ್ಲಿ ಢವಳಗಿ,

ಗುಂಡಕರ್ಜಗಿ, ಬಸರಕೋಡ ಮತ್ತು ಅಲಕೊಪ್ಪರ ಗ್ರಾಮಗಳು ಇರುತ್ತವೆ. ಢವಳಗಿ, ಗುಂಡಕರ್ಜಗಿ ಹಾಗೂ ಬಸರಕೋಡ ಗ್ರಾಮಗಳ ಖರೀದಿ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎನ್ನುವುದು ನಿಜ. ಅಲಕೊಪ್ಪರ ಗ್ರಾಮದಲ್ಲಿ ಎಷ್ಟು ಜಮೀನುಗಳು ಮಾರಾಟ ಆಗಿರುತ್ತವೆ ಎನ್ನುವ ಕುರಿತು ನನಗೆ ಮಾಹಿತಿ ಇರುವುದಿಲ್ಲ. ನಿ.ಪಿ.13 ರಲ್ಲಿ ನಮೂದಿಸಲಾದ ಜಮೀನನ್ನು ಯಾರು ಯಾರಿಗೆ ಮತ್ತು ಎಷ್ಟು ಬೆಲೆಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಿ.ಪಿ.13 ರಲ್ಲಿ ನಮೂದಿಸಲಾದ ಜಮೀನನ್ನು ಗುಂಟಾ ಆಧಾರದ ಮೇಲೆ ಖರೀದಿಸಲಾಗಿದೆ ಎನ್ನುವುದು ನಿಜ. ಸಾಮಾನ್ಯವಾಗಿ ಗುಂಟಾ ಜಮೀನುಗಳನ್ನು ಮನೆ ಕಟ್ಟಲು, ವಾಣಿಜ್ಯ ಮಳಿಗೆಗಳನ್ನು ಕಟ್ಟಲು ಖರೀದಿಸುತ್ತಾರೆ ಎನ್ನುವುದು ನಿಜ. ವಾಣಿಜ್ಯ ಉದ್ದೇಶಕ್ಕಾಗಿ ಮತ್ತು ಮನೆ ಕಟ್ಟಲು ಖರೀದಿಸಿದಂತಹ ಜಮೀನುಗಳು ಸಾಮಾನ್ಯವಾಗಿ ಹೆಚ್ಚು ಬೆಲೆಗೆ ಮಾರಾಟವಾಗುತ್ತವೆ ಎನ್ನುವುದು ನಿಜ. ಮುದ್ದೇಬಿಹಾಳದಿಂದ ಬಿದರಕುಂದಿ 5 ಕಿಮೀ ದೂರದಲ್ಲಿದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 3 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ. ಬಿದರಕುಂದಿ ಗ್ರಾಮದಿಂದ ಬಸರಕೋಡ 8 ಕಿಮೀ ದೂರದಲ್ಲಿದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 5 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ. 5 ಕಿಮೀ ದೂರದಲ್ಲಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಬಸರಕೋಡ ಗ್ರಾಮದಿಂದ ರೂಡಗಿ 8 ಕಿಮೀ ದೂರದಲ್ಲಿದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 2 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ. 2 ಕಿಮೀ ದೂರದಲ್ಲಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

7) ನಿ.ಪಿ.2 ರಿಂದ 11 ಬಿದರಕುಂದಿ ಹಾಗೂ ಮುದ್ದೇಬಿಹಾಳ ಗ್ರಾಮಗಳ ಖರೀದಿ ಪತ್ರಗಳು ಮತ್ತು ಖರಿದಿ ಕರಾರು ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ. ನಿ.ಪಿ.2 ರಿಂದ 10 ಹಾಗೂ 13 ದಾಖಲೆಗಳು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

8) ನಮ್ಮ ಊರು ರೂಡಗಿ ಗ್ರಾಮದಲ್ಲಿ ಒಣಬೇಸಾಯದ ಜಮೀನುಗಳು ಸಾಕಷ್ಟು ಇರುತ್ತವೆ ಎಂದರೆ ಸರಿ. ನನ್ನ ಜಮೀನಿಗೆ ಇಂತಿಷ್ಟೇ ಮಾರುಕಟ್ಟೆ ಬೆಲೆ ಇರುತ್ತದೆ ಎಂದು ತೋರಿಸಲು ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಹಿಂದಿನ 3 ವರ್ಷಗಳ ಅವಧಿಯಲ್ಲಿ ಖರೀದಿಯಾದ ನಮ್ಮೂರಿನ ಜಮೀನುಗಳ ಖರೀದಿ ಪತ್ರಗಳನ್ನು ಅಥವಾ ಖರೀದಿ ಒಪ್ಪಂದ ಪತ್ರಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ.

9) ರೂಡಗಿ ಗ್ರಾಮದ ಸ.ನಂ.163/3 ನಮ್ಮ ಜಮೀನಿಗೆ ಸಮೀಪದಲ್ಲಿದೆ ಎನ್ನುವುದು ನಿಜ. ಸದರಿ ಜಮೀನನ್ನು ದಿನಾಂಕಃ 11.05.2015 ರಂದು ಪ್ರತಿ ಎಕರೆಗೆ ರೂ.55,000/- ರಂತೆ ಮಾರಾಟ

ಮಾಡಲಾಗಿದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಅದೇ ರೀತಿ ಸ.ನಂ.160 ಮತ್ತು 164 ನೇದ್ದವುಗಳು ಪ್ರತಿ ಎಕರೆಗೆ ರೂ.50,000/- ಮಾರಾಟ ಆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಮಾನ್ಯವಾಗಿ ಅಕ್ಕ-ಪಕ್ಕದ ಜಮೀನುಗಳು ಒಂದೇ ಬೆಲೆಗೆ ಮಾರಾಟವಾಗುತ್ತವೆ ಎನ್ನುವುದು ನಿಜ.

10) ನಾನು ಒಂದು ಎಕರೆಗೆ 80 ಲಕ್ಷ ಪರಿಹಾರ ಕೇಳಿದ್ದು, ಅದಕ್ಕೆ ಸೂಕ್ತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸರ್ಕಾರ ಸೂಕ್ತವಾದ ಬೆಲೆ ಕೊಟ್ಟಿದ್ದರು ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.